# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೋವಿಡ್ 19 ಪರೀಕ್ಷೆಗಳಾದ ಆರ್ ಟಿ – ಪಿ ಸಿ.ಆರ್ , ಟ್ರೂ –ನ್ಯಾಟ್, ಸಿ ಬಿ –ನ್ಯಾಟ್ , ರ್‍ಯಾಪಿಡ್ ಆಂಟಿಜೆನ್ , ಎಕ್ಸ್‌ಪ್ರೆಸ್ ಆರ್ ಟಿ – ಪಿ ಸಿ ಆರ್ ಮತ್ತು ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆಗಳ ದರವನ್ನು ಮರು ನಿಗದಿಪಡಿಸುವ ಬಗ್ಗೆ.

**ಉಲ್ಲೇಖ:** (1) ಸುತ್ತೋಲೆ ಸಂಖ್ಯೆ:HFW 74 ACS 2020, ದಿನಾಂಕ: 31.3.2020
(2) ಸುತ್ತೋಲೆ ಸಂಖ್ಯೆ : HFW 89 CGM 2020, ದಿನಾಂಕ: 17.4.2020
(3) ಆದೇಶ ಸಂಖ್ಯೆ :HFW 264 ACS 2020, ದಿನಾಂಕ: 24.07.2020
(4) ಆದೇಶ ಸಂಖ್ಯೆ :HFW 307 ACS 2020, ದಿನಾಂಕ: 17.08.2020
(5) ಆದೇಶ ಸಂಖ್ಯೆ :HFW 363 ACS 2020, ದಿನಾಂಕ: 24.09.2020
(6) ಆದೇಶ ಸಂಖ್ಯೆ :HFW 432 ACS 2020, ದಿನಾಂಕ: 9.12.2020

********

**ಪ್ರಸ್ತಾವನೆ:**

ಕೋವಿಡ್–19 ಪತ್ತೆ ಹಚ್ಚಲು ನಡೆಸುವ ಪರೀಕ್ಷೆಗಳಾದ ಆರ್ ಟಿ – ಪಿ ಸಿ.ಆರ್ , ಟ್ರೂ –ನ್ಯಾಟ್, ಸಿ ಬಿ –ನ್ಯಾಟ್ , ರ್‍ಯಾಪಿಡ್ ಆಂಟಿಜೆನ್ , ಎಕ್ಸ್‌ಪ್ರೆಸ್ ಆರ್ ಟಿ – ಪಿ ಸಿ ಆರ್ ಮತ್ತು ರ್‍ಯಾಪಿಡ್ ಆಂಟಿಜೆನ್‌ಗಳ ದರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಮೇಲಿನ ಉಲ್ಲೇಖಗಳ ಅನ್ವಯ ಸುತ್ತೋಲೆ ಹಾಗೂ ಆದೇಶಗಳನ್ನು ಹೊರಡಿಸಲಾಗಿದೆ. ಆದಾಗ್ಯೂ, ಸದರಿ ಪರೀಕ್ಷೆಗಳಿಗೆ ಅಗತ್ಯವಿರುವ ರಾಸಾಯನಿಕಗಳು ಹಾಗೂ ಇತರ ವಸ್ತುಗಳ ದರವು ಮಾರುಕಟ್ಟೆಯಲ್ಲಿ ಗಣನೀಯವಾಗಿ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಕೋವಿಡ್ 19 ತಾಂತ್ರಿಕ ಸಲಹಾ ಸಮಿತಿಯು ಸದರಿ ಪರೀಕ್ಷೆಗಳ ದರಗಳನ್ನು ಮರು ಪರಿಶೀಲಿಸಿ, ದರಗಳನ್ನು ನಿಗದಿಪಡಿಸಿ, ಆದೇಶ ಹೊರಡಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಿರುತ್ತದೆ. ಇದರನ್ವಯ, ರಾಜ್ಯದ ಖಾಸಗಿ ಪ್ರಯೋಗಶಾಲೆಗಳಲ್ಲಿ ಕೈಗೊಳ್ಳುವ ಕೋವಿಡ್ 19 ಪರೀಕ್ಷೆಗಳಿಗೆ ದರಗಳನ್ನು ಪರಿಷ್ಕರಿಸಿ ನಿಗದಿಗೊಳಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಕುಕ 89 ಸಿಜಿಎಂ 2020, ಬೆಂಗಳೂರು, ದಿನಾಂಕ: 13-10-2021

ಸದರಿ ಆದೇಶವನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ 2020ರ ಸೆಕ್ಷನ್ 4 ಮತ್ತು 5 ರ ಅಡಿಯಲ್ಲಿ ಹಾಗೂ ಕರ್ನಾಟಕ ಹಾಗೂ ಕರ್ನಾಟಕ ಸಾಂಕ್ರಾಮಿಕ ರೋಗಗಳ ( ಕೋವಿಡ್ 19 ) ರೆಗ್ಯುಲೇಷನ್ 2020, ಅಧಿಸೂಚನೆ ಸಂಖ್ಯೆ: ಆಕುಕ 54 ಸಿಜಿಎಂ 2020, ದಿನಾಂಕ: 11.3.2020ರ ಸೆಕ್ಷನ್ – 7 ಅಡಿಯಲ್ಲಿ ಮತ್ತು ಕರ್ನಾಟಕ ಸಾಂಕ್ರಾಮಿಕ ರೋಗಗಳ ( ಕೋವಿಡ್ 19) ರೆಗ್ಯುಲೇಷನ್ 2020, ಅಧಿಸೂಚನೆ ಸಂಖ್ಯೆ: ಆಕುಕ 54 ಸಿ ಜಿ ಎಂ 2020, ದಿನಾಂಕ: 20.3.2020 ಸೆಕ್ಷನ್ 3 ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಖಾಸಗಿ ಪ್ರಯೋಗಶಾಲೆಗಳು ಈ ಮೇಲೆ ತಿಳಿಸಿದ ಕೋವಿಡ್ 19 ಪರೀಕ್ಷಾ ವಿಧಾನಗಳ ಅಡಿಯಲ್ಲಿ ಪರೀಕ್ಷೆಗಳನ್ನು ನಡೆಸಲು

ಈ ಕೆಳಕಂಡಂತೆ ಪರಿಷ್ಕೃತ ದರಗಳನ್ನು ನಿಗದಿಪಡಿಸಿದ ಆದೇಶವನ್ನು ಹೊರಡಿಸಲಾಗಿದೆ.

| ಕ್ರ.ಸಂ | ಪರೀಕ್ಷಾ ವಿಧಾನ | ಸ್ಕ್ರೀನಿಂಗ್ ಪರೀಕ್ಷೆ ಹಾಗೂ ಖಚಿತ ಪರೀಕ್ಷೆಗಳಿಗೆ ಮರು ನಿಗದಿ ಪಡಿಸಿರುವ ಗರಿಷ್ಠ ದರ ಪಿಪಿಇ ಕಿಟ್‌ನದರವನ್ನೂ ಒಳಗೊಂಡಂತೆ |
|---|---|---|
| 1. | ಆರ್‌ಟಿ-ಪಿಸಿಆರ್ ಪರೀಕ್ಷೆ : ಸರ್ಕಾರಿ ಆಸ್ಪತ್ರೆಗಳಿಂದ ಖಾಸಗಿ ಪ್ರಯೋಗಶಾಲೆಗಳಿಗೆ ಮಾದರಿಗಳನ್ನು ಕಳುಹಿಸಿದಾಗ | ರೂ.400/- |
| 2. | ಆರ್‌ಟಿ-ಪಿಸಿಆರ್ ಪರೀಕ್ಷೆ : ಖಾಸಗಿ ಆಸ್ಪತ್ರೆಗಳಿಂದ ಸ್ವೀಕೃತವಾದ ಮಾದರಿಗಳನ್ನು ಖಾಸಗಿ ಪ್ರಯೋಗಶಾಲೆಗಳಲ್ಲಿ ಪರೀಕ್ಷಿಸಿದಾಗ | ರೂ.500/- |
| 3. | ಟ್ರೂ ನ್ಯಾಟ್ ಪರೀಕ್ಷೆ: ಖಾಸಗಿ ಆಸ್ಪತ್ರೆಗಳಿಂದ ಸ್ವೀಕೃತವಾದ ಮಾದರಿಗಳನ್ನು ಖಾಸಗಿ ಪ್ರಯೋಗಶಾಲೆಗಳಲ್ಲಿ ಪರೀಕ್ಷಿಸಿದಾಗ | ರೂ.1250/- |
| 4. | ಸಿ ಬಿ ನ್ಯಾಟ್ ಪರೀಕ್ಷೆ : ಖಾಸಗಿ ಆಸ್ಪತ್ರೆಗಳಿಂದ ಸ್ವೀಕೃತವಾದ ಮಾದರಿಗಳನ್ನು ಖಾಸಗಿ ಪ್ರಯೋಗಶಾಲೆಗಳಲ್ಲಿ ಪರೀಕ್ಷಿಸಿದಾಗ | ರೂ.1600/- |
| 5. | ರ್‍ಯಾಪಿಡ್‌ಆಂಟಿಜೆನ್ ಪರೀಕ್ಷೆ: ಖಾಸಗಿ ಪ್ರಯೋಗಶಾಲೆ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ | ರೂ.400/- |
| 6. | ರ್‍ಯಾಪಿಡ್‌ಆ್ಯಂಟಿಬಾಡಿ ಪರೀಕ್ಷೆ (IgG ELISA) : ಖಾಸಗಿ ಪ್ರಯೋಗಶಾಲೆ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ | ರೂ.500/- |
| 7 | ಎಕ್ಸ್‌ಪ್ರೆಸ್ ಆರ್ ಟಿ – ಪಿ ಸಿ ಆರ್ : ಖಾಸಗಿ ಪ್ರಯೋಗಶಾಲೆ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ | ರೂ 3000/- |

**ಸೂಚನೆ:-** ಮೇಲ್ಕಾಣಿಸಿದ ಪರೀಕ್ಷೆಗಳಿಗೆ ಮಾದರಿಯನ್ನು ಮನೆಯಿಂದ ಸಂಗ್ರಹಿಸುವ ಸಂದರ್ಭದಲ್ಲಿ ಸಂಗ್ರಹ ದರವು (Collection Charges) ರೂ 250/- ಗಳನ್ನು ಮೀರಬಾರದು.

ಆರ್ ಟಿ – ಪಿ ಸಿ.ಆರ್ , ಟ್ರೂ –ನ್ಯಾಟ್, ಸಿ ಬಿ –ನ್ಯಾಟ್ , ರ್‍ಯಾಪಿಡ್ ಆಂಟಿಜೆನ್ , ಎಕ್ಸ್‌ಪ್ರೆಸ್ ಆರ್ ಟಿ – ಪಿ ಸಿ ಆರ್ ಮತ್ತು ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆಗಳನ್ನು ಐ.ಸಿ.ಎಂ.ಆರ್ ನಿಂದ ಅನುಮೋದಿಸಲ್ಪಟ್ಟ ಪ್ರಯೋಗಾಲಯಗಳಲ್ಲಿ ಮಾತ್ರ ಕೈಗೊಳ್ಳತಕ್ಕದ್ದು ಮತ್ತು ಈ ಪ್ರಯೋಗಾಲಯಗಳು ಐ.ಸಿ.ಎಂ.ಆರ್ ಹಾಗೂ ರಾಜ್ಯ ಸರ್ಕಾರವು ನಿಗದಿಪಡಿಸಲಾದ ಇತರ ಎಲ್ಲಾ ಷರತ್ತುಗಳನ್ನು ಪಾಲಿಸತಕ್ಕದ್ದು.

**(ಟಿ ಕೆ ಅನಿಲ್ ಕುಮಾರ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

<u>ಪ್ರತಿಯನ್ನು</u> :

1. ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮುಖ್ಯ ಆಯುಕ್ತರು, ಬಿ ಬಿ ಎಂ ಪಿ
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
4. ಅಭಿಯಾನ ನಿರ್ದೇಶಕರು-ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು
5. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
6. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಯ, ಎಲ್ಲಾ ಜಿಲ್ಲಾ ಪಂಚಾಯತ್
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
8. ನಿರ್ದೇಶಕರು, ವೈದ್ಯಕೀಯ ಶಿಕ್ಷಣ.
9. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ ಜಿಲ್ಲಾ ಸರ್ಜನ್ ಗಳು – ಎಲ್ಲಾ ಜಿಲ್ಲೆಗಳು
10. ಕೋವಿಡ್ 19 ಪರೀಕ್ಷೆಗಳನ್ನು ನಡೆಸುವ ಎಲ್ಲಾ ಖಾಸಗಿ ಪ್ರಯೋಗಶಾಲೆಗಳು.

26

# PROCEEDINGS OF THE GOVERNMENT OF KARNATAKA

**Subject:** Re-fixation of rates for COVID-19 testing in the State for tests done through RT-PCR, True-NAT, CBNAAT, Rapid Antigen , Express RT – PCR and Rapid Antibody test kits.

**Reference:** (1) Circular No. HFW 74 ACS 2020, dated 31.3.2020
(2) Circular No. HFW 89 CGM 2020, dated 17.4.2020
(3) Order No. HFW 264 ACS 2020, dated 24.07.2020
(4) Order No. HFW 307 ACS 2020, dated 17.08.2020
(5) Order No. HFW 363 ACS 2020, dated 24.09.2020
(6) Order No. HFW 432 ACS 2020, dated 9.12.2020

********

**Preamble:-**

The orders regarding the revised rates for COVID 19 testing in Private testing Laboratories was issued vide Orders cited above references. However, the prices of consumables & chemicals available in the market for COVID 19 testing have considerably decreased. In this regard, the State Level COVID 19 Technical Advisory Committee, has now submitted the proposal to reconsider the ceiling rates COVID 19 testing methods. Hence, the current order the maximum rates of COVID 19 tests conducted in Private Laboratories is revised.

**Government Order No: AKUKA 89 CGM 2020,**

**BENGALURU, Dated: 13-10-2021**

This Order is issued exercising powers under the provisions of section (iv) & (v) of the Karnataka Epidemic Diseases Act & section (vii) of Karnataka Communicable Diseases ( COVID 19) Regulations 2020, Notification No: HFW 54 CGM 2020, Dated: 2020 & section (iii) of Karnataka Communicable Diseases ( COVID 19) Regulations 2020 Notification No: HFW 54 CGM 2020, Dated: 20.3.2020.

**The revised rates of the COVID 19 tests are as follows.**

| Sl No. | Type of Test | Rate ceiling per test including screening tests and confirmatory test inclusive of the cost of PPE Kit |
|---|---|---|
| 1 | RT-PCR testing of the samples sent by Government in private laboratories | Rs: 400/- |

| | | |
|---|---|---|
| 2 | RT-PCR testing of private samples in private laboratories | Rs: 500/- |
| 3 | True-NAT testing of private samples in private laboratories | Rs: 1250/- |
| 4 | CBNAAT testing of private samples in private laboratories | Rs: 1600/- |
| 5 | Rapid Antigen Testing by private labs and hospitals | Rs: 400/- |
| 6 | Rapid Antibody Test (IgG ELISA) by private labs and hospitals | Rs: 500/- |
| 7 | Express RT – PCR test at laboratories | Rs. 3000/- |

**Note:-**

When the samples are collected at home for any of the above tests, the collection charges should not exceed Rs 250/- per home collection.

RT-PCR, True-NAT, CB-NAAT, Rapid Antigen Testing, Express RT – PCR Test and Rapid Antibody Testing should be done only in the ICMR approved laboratories and these laboratories shall comply to the conditions laid down by the ICMR and State Government in conducting COVID-19 tests.

**(T K Anil Kumar)**
Principal Secretary to Government
Health and Family Welfare Department

**To:-**

1. Principal Secretary to Govt., Medical Education Department
2. Chief Commissioner, BBMP, Bengaluru.
3. Commissioner, Health & Family Welfare Services, Bengaluru.
4. Mission Director, NHM, Bengaluru.
5. All Deputy Commissioners
6. All CEOs of ZPs.
7. Director, H & FWS, Bengaluru
8. Director, Medical Education Department
9. All District Health and Family Welfare Officers / All District Surgeons
10. All Private Laboratories testing COVID-19.